ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಕಾರ್ಯಪಾಲಕ ಅಭಿಯಂತರರು ಕಛೇರಿ,
ಉತ್ತರಹಳ್ಳಿ ಉಪವಿಭಾಗ, ಬೆಂಗಳೂರು.

ಸಂ:ಸ.ಕಾ.ಅ(ಉ)/ಪಿಆರ್/ /20-21

ದಿನಾಂಕ:

**ದಿನಾಂಕ:06-02-2021ರಂದು ನಡೆದ 184-ಉತ್ತರಹಳ್ಳಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:06-02-2021ರಂದು ಶನಿವಾರ ಅಪರಾಹ್ನ 12.00 ಘಂಟೆಗೆ ವಾರ್ಡ್ ನಂ:184 ಉತ್ತರಹಳ್ಳಿ, ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಮತ್ತು ಸಂಘ ಸಂಸ್ಥೆ ಸದಸ್ಯರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:**

| ಕ್ರಮಸಂಖ್ಯೆ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀಮತಿ ಚೈತ್ರಾ ಹೊನ್ನಾಪುರ | ಅಧ್ಯಕ್ಷರು ವಾಡ್ ನೋಡಲ್ ಅಧಿಕಾರಿ | ಹಾಜರಿದ್ದವರು |
| 2 | ಶ್ರೀ ಎಂ ಜಿ ಕುಮಾರ್ | ಕಾರ್ಯದರ್ಶಿಗಳು | ಹಾಜರಿದ್ದವರು |
| 3 | ಶ್ರೀ ಎಸ್.ಕೆ ಸುದರ್ಶನ | ವೈಸ್ ಪ್ರೆಸಿಡೆಂಟ್, ಪೂರ್ಣ ಪ್ರಜ್ಞಾ ಆರ್.ಡಬ್ಲ್ಯೂ.ಎ | ಹಾಜರಿದ್ದವರು |
| 4 | ಶ್ರೀ ಅರುಣ್ ಕುಮಾರ್ ಮುತ್ತಾಲ್ ಕೆ ದೇಸಾಯಿ | ವೆಟನರಿ ಇನ್ಸ್‌ಪೆಕ್ಟರ್ | ಹಾಜರಿದ್ದವರು |
| 5 | ಶ್ರೀನಾಗರಾಜ್ ಹೆಗಡೆ | ಪ್ಲಾಂ ಕ್ಲವ್ ಎನ್‌ಕ್ಲೇವ್ | ಹಾಜರಿದ್ದವರು |
| 6 | ಶ್ರೀ ರಾಘವೆಂದ್ರ ಜಿ | ಎಜಿಎಸ್ ಲೇಔಟ್ | ಹಾಜರಿದ್ದವರು |
| 7 | ಶ್ರೀ ರವೀಂದ್ರ | ಎ.ಇ.ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದವರು |
| 8 | ಶ್ರೀ ಶಶಿಕುಮಾರ್ | ಆರೋಗ್ಯಾಧಿಕಾರಿ | ಹಾಜರಿದ್ದವರು |
| 9 | ಶ್ರೀ ಡಾ॥ ನಿಖಿಲ್ | ಹೆಲ್ತ್ ಡಿಪಾರ್ಟ್‌ಮೆಂಟ್ | ಹಾಜರಿದ್ದವರು |
| 10 | ಶ್ರೀ ಸಿದ್ದರಾಜು | ವಿದ್ಯುತ್ ವಿಭಾಗ | ಹಾಜರಿದ್ದವರು |
| 11 | ಶ್ರೀ ರಾಕೇಶ್ | ಅಭಿಜ್ಞಾನ ಫೌಂಡೇಶನ್ | ಹಾಜರಿದ್ದವರು |
| 12 | ಶ್ರೀ ಡಿ ನಾರಾಯಣ | ಸದಸ್ಯರು | ಹಾಜರಿದ್ದವರು |
| 13 | ಶ್ರೀಮತಿ ಮಮತಾ | ಸದಸ್ಯರು | ಹಾಜರಿದ್ದವರು |
| 14 | ಶ್ರೀ ರಾಘವೇಂದ್ರ | ಘನತ್ಯಾಜ್ಯ | ಹಾಜರಿದ್ದವರು |
| 16 | ಶ್ರೀ ರಮೇಶ್ | ಅಭಿಯಂತರರು ವಿದ್ಯುತ್ | ಹಾಜರಿದ್ದವರು |
| 17 | ಶ್ರೀ ನರಸಪ್ಪ | ತೋಟಗಾರಿಕೆ ಸಹಾಯಕರು | ಹಾಜಿರಿದ್ದವರು |

ಅಧ್ಯಕ್ಷರು
ವಾರ್ಡ್ ನಂ:184 ಉತ್ತರಹಳ್ಳಿ

Scanned with CamScanner

**ಸಭೆಯ ನಡುವಳಿಗಳು:-**

ಸಭೆಯನ್ನು ಉದ್ದೇಶಿಸಿ ನೋಡಲ್ ಅಧಿಕಾರಿಗಳು ಕೋವಿಡ್-19 ಸಾಂಕ್ರಾಮಿಕ ರೋಗ ಹಿನ್ನೆಲೆ ವಾರ್ಡ್ ಮಟ್ಟದಲ್ಲಿ ತೆಗೆದುಕೊಳ್ಳಲಾಗುತ್ತಿರುವ ಕ್ರಮಗಳ ಬಗ್ಗೆ ವಿಚಾರಿಸಿದರು ಸಭೆಯಲ್ಲಿ ಉಪಸ್ಥಿತರಿಂದ ಆರೋಗ್ಯಾಧಿಕಾರಿಗಳು ಕೋವಿಡ್-19, ಟೆಸ್ಟಿಂಗ್ ವಾರ್ಡ್ ಮಟ್ಟದಲ್ಲಿ ಪ್ರತಿದಿನ ನಡೆಸಲಾಗುತ್ತಿದ್ದು, ಒಟ್ಟಾರೆ ವಾರ್ಡ್ ಮಟ್ಟದಲ್ಲಿ ಏಳು ಕೋವಿಡ್ ಟೆಸ್ಟಿಂಗ್ ಕ್ಯಾಂಪ್‌ಗಳನ್ನು ಹಾಕಲಾಗಿದ್ದು, ಒಂದು ಮೊಬೈಲ್ ಕ್ಯಾಂಪ್ ಕಾರ್ಯನಿರ್ವಹಿಸುತ್ತಿದ್ದು ಕೋವಿಡ್ ಟೆಸ್ಟಿಂಗ್ ಪ್ರಕ್ರಿಯೆಯನ್ನು ನಡೆಸಲಾಗುತ್ತಿರುವುದಾಗಿ ಆರೋಗ್ಯಾಧಿಕಾರಿಗಳು ತಿಳಿಸುತ್ತಾರೆ.

- ವಾರ್ಡ್ ವ್ಯಾಪ್ತಿಯ ಆರೋಗ್ಯ ಅಧಿಕಾರಿಗಳು, ಸೂಪರ್ ವೈಸರ್ ಉಪಸ್ಥಿತರಿದ್ದು, ಘನತ್ಯಾಜ್ಯ ವಿಷಯವಾಗಿ ಬ್ಲಾಕ್ ಸ್ಪಾಟ್‌ಗಳನ್ನು ಪ್ರತಿದಿನ ಪರಿವೀಕ್ಷಿಸಿ, ಅದನ್ನು ನಿರ್ಮೂಲನೆ ಮಾಡುವಲ್ಲಿ ಕ್ರಮವಹಿಸಲು ಸೂಚಿಸಲಾಯಿತು.

- ಹಸಿ ಮತ್ತು ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ಬೇರ್ಪಡಿಸುವ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಆರೋಗ್ಯಾಧಿಕಾರಿಗಳು ಆರ್.ಡಬ್ಲ್ಯೂ.ಎ ಸದಸ್ಯರೊಡನೆ ಸಮಾಲೋಚಿಸಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಸಭೆಯಲ್ಲಿ ಸೂಚಿಸಲಾಯಿತು.
- ವಾರ್ಡ್ ಮಟ್ಟದಲ್ಲಿ ಪ್ರತಿ ಮನೆಯಲ್ಲಿ ಹಸಿ ಮತ್ತು ಒಣ ತ್ಯಾಜ್ಯ ಪ್ರತ್ಯೇಕವಾಗಿ ಸಂಗ್ರಹಣೆ ಆಗುತ್ತಿರುವ ಬಗ್ಗೆ ಹಾಗೂ ಆಟೋ ಟಿಪ್ಪರ್/ತಳ್ಳುವ ಗಾಡಿ ಮನೆಮನೆಗೆ ತಲುಪುತ್ತೀರುವ ಬಗ್ಗೆ ಆರೋಗ್ಯಾಧಿಕಾರಿಗಳು ಹಾಗೂ ಸೂಪರ್ ವೈಸರ್‌ಗಳು ಗಮನಹರಿಸಲು ಕ್ರಮ ತೆಗೆದುಕೊಳ್ಳಲು ನೂಡಲ್ ಅಧಿಕಾರಿಗಳು ಸೂಚಿಸಿದರು.
- ಎ.ಜಿ.ಎಸ್ ಲೇಔಟ್ ಯು.ಜಿ.ಡಿ ಲೈನ್ ರೆಸ್ಟೋರೇಷನ್ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಲಾಯಿತು.
- ಯಾವುದೇ ರಸ್ತೆ ಅಗೆತ ಕಾರ್ಯಗಳನ್ನು ಬೆಸ್ಕಾಂ ವತಿಯಿಂದ ತೆಗೆದುಕೊಂಡಿದ್ದಲ್ಲಿ ಯು.ಜಿ.ಡಿ ಲೈನ್‌ನಿಂದ 3 ಅಡಿ ಅಂತರದಲ್ಲಿ ಇರುವಂತೆ ಗಮನವಹಿಸಿ ಕಾರ್ಯಗಳನ್ನು ಸಂಬಂಧಪಟ್ಟ ಬೆಸ್ಕಾಂ ಅಭಿಯಂತರರು ಗಮನಿಸಿ ಮೇಲ್ವಿಚಾರ ನಡೆಸಲು ಸೂಚಿಸಲಾಯಿತು. ಮುಂದುವರೆದಂತೆ ಸದರಿ ಕಾರ್ಯಗಳು ನಿರ್ವಹಿಸುವ ಸಮಯದಲ್ಲಿ ಪವರ್ ಕಟ್ ರೆಸ್ಟೋರೇಷನ್‌ಗೆ ಸಂಬಂಧಿಸಿದಂತೆ ಗಮನಹರಿಸಲು ಸೂಚಿಸಲಾಯಿತು.
- ಪೂರ್ಣಪ್ರಜ್ಞಾ ಮತ್ತು ಎ.ಜಿ.ಎಸ್. ಲೇಔಟ್ ಪ್ರದೇಶದಲ್ಲಿ ಪಾರ್ಕ್-5 ಸಂಬಂಧಿಸಿದಂತೆ ಕಾಮಗಾರಿ ಪೂರ್ಣಗೊಳ್ಳದೇ ಇರುವ ಬಗ್ಗೆ ದೂರಿದ್ದು, ಸಭೆಯಲ್ಲಿ ಉಪಸ್ಥಿತರಿಂದ ತೋಟಗಾರಿಕಾ ವಿಭಾಗದವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ನೂಡಲ್ ಅಧಿಕಾರಿಯವರು ನಿರ್ದೇಶಿಸಿದರು ಹಾಗೂ ವರದಿಯನ್ನು ಮುಂದಿನ ಸಭೆಯಲ್ಲಿ ನೀಡಲು ತಿಳಿಸಿದರು.


- ಎ.ಜಿ.ಎಸ್ ಲೇಔಟ್ ಯು.ಜಿ.ಡಿ ಲೈನ್ ರೆಸ್ಟೋರೇಷನ್ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಲಾಯಿತು.
- ಯಾವುದೇ ರಸ್ತೆ ಅಗೆತ ಕಾರ್ಯಗಳನ್ನು ಬೆಸ್ಕಾಂ ವತಿಯಿಂದ ತೆಗೆದುಕೊಂಡಿದ್ದಲ್ಲಿ ಯು.ಜಿ.ಡಿ ಲೈನ್‌ನಿಂದ 3 ಅಡಿ ಅಂತರದಲ್ಲಿ ಇರುವಂತೆ ಗಮನವಹಿಸಿ ಕಾರ್ಯಗಳನ್ನು ಸಂಬಂಧಪಟ್ಟ ಬೆಸ್ಕಾಂ ಅಭಿಯಂತರರು ಗಮನಿಸಿ ಮೇಲ್ವಿಚಾರ ನಡೆಸಲು ಸೂಚಿಸಲಾಯಿತು. ಮುಂದುವರೆದಂತೆ ಸದರಿ ಕಾರ್ಯಗಳು ನಿರ್ವಹಿಸುವ ಸಮಯದಲ್ಲಿ ಪವರ್ ಕಟ್ ರೆಸ್ಟೋರೇಷನ್‌ಗೆ ಸಂಬಂಧಿಸಿದಂತೆ ಗಮನಹರಿಸಲು ಸೂಚಿಸಲಾಯಿತು.
- ಪೂರ್ಣಪ್ರಜ್ಞಾ ಮತ್ತು ಎ.ಜಿ.ಎಸ್. ಲೇಔಟ್ ಪ್ರದೇಶದಲ್ಲಿ ಪಾರ್ಕ್-5 ಸಂಬಂಧಿಸಿದಂತೆ ಕಾಮಗಾರಿ ಪೂರ್ಣಗೊಳ್ಳದೇ ಇರುವ ಬಗ್ಗೆ ದೂರಿದ್ದು, ಸಭೆಯಲ್ಲಿ ಉಪಸ್ಥಿತರಿಂದ ತೋಟಗಾರಿಕಾ ವಿಭಾಗದವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ನೂಡಲ್ ಅಧಿಕಾರಿಯವರು ನಿರ್ದೇಶಿಸಿದರು ಹಾಗೂ ವರದಿಯನ್ನು ಮುಂದಿನ ಸಭೆಯಲ್ಲಿ ನೀಡಲು ತಿಳಿಸಿದರು.


- ಪಾಧುಕ ಮಂದಿರ ಬಳಿ ಸ್ಯಾನಿಟರಿ ದುವ್ಯವಸ್ಥೆ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಯವರಿಗೆ ಪರಿಶೀಲಿಸಿ ಕ್ರಮವಹಿಸಲು ನೂಡಲ್ ಅಧಿಕಾರಿಯವರಿಗೆ ನಿರ್ದೇಶಿಸಿದೆ.

ಅಧ್ಯಕ್ಷರು
ವಾರ್ಡ್ ನಂ:184 ಉತ್ತರಹಳ್ಳಿ

Scanned with CamScanner

- ತೂರಹಳ್ಳಿ ಪಾಧುಕ ಮಂದಿರ ಜೆ.ಹೆಚ್.ಎಸ್. ಲೇಔಟ್ ಸ್ಥಳಗಳಲ್ಲಿ ವಾರ್ಡ್ ವರ್ಕ್ ಸಂಬಂಧಪಟ್ಟಂಗೆ ಬಿ.ಡಬ್ಲೂ.ಎಸ್.ಎಸ್.ಬಿ ಪರಿಶೀಲಿಸಲು ನಿರ್ದೇಶಿಸಲಾಯಿತು.
- 5ನೇ ಕ್ರಾಸ್ ಪೈಪ್ ರಿಪ್ಲೇಸ್‌ಮೆಂಟ್ ಹಾಗೂ ರೆಸ್ಟೋರೇಷನ್ ಸಂಬಂಧ ಕ್ರಮವಹಿಸಲು ಸಂಬಂಧಪಟ್ಟ ಇಲಾಖೆಯವರಿಂದ ತಿಳಿಸಲಾಯಿತು.
- ಪೂರ್ಣ ಪ್ರಜ್ಞಾ ಕ್ಷೇಮಾಭಿವೃದ್ಧಿ ಸಂಘದ ಪರವಾಗಿ ಹಾಜರಿದ್ದ ಸದಸ್ಯರು ಕೆಲವೊಂದು ಅಡ್ಡರಸ್ತೆ ಹಾಗೂ ಮುಖ್ಯರಸ್ತೆ ವಿವರ ನೀಡಿ ಡಾಂಬರೀಕರಣ ಮಾಡಬೇಕಾಗಿರುವುದಾಗಿ ಮನವಿ ಸಲ್ಲಿಸಿದರು. ಈ ಬಗ್ಗೆ ಪರಿಶೀಲಿಸಿ, ಕ್ರಮವಹಿಸಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು. ಹಾಗೂ ಮುಂದುವರೆದಂತೆ 11,13/14 ನೇ ಮುಖ್ಯರಸ್ತೆಗಳು ಹಾಗೂ ಉದ್ಯಾನವನ ಸಂಖ್ಯೆ 4ರ ಹತ್ತಿರ ರಸ್ತೆ ಉಬ್ಬುಗಳನ್ನು ನಿರ್ಮಿಸುವುದು ಮತ್ತು 29ನೇ ಮುಖ್ಯರಸ್ತೆಯಲ್ಲಿ 2ರಸ್ತೆ ಉಬ್ಬುಗಳಿದ್ದು, ಈ ಉಬ್ಬುಗಳನ್ನು ವಾಹನ ಚಾಲಕರು ಗಮನಿಸಲು ಬಣ್ಣವನ್ನು ಹಚ್ಚಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಬೇಕಾಗಿ ವಿನಂತಿಸಿದರು.

- <u>ವಿದ್ಯುತ್ ಇಲಾಖೆ:-</u>ಜಯನಗರ ಹೌಸಿಂಗ್ ಸೊಸೈಟಿನಲ್ಲಿ ವಿದ್ಯುತ್ ದೀಪಗಳು ಇರುವುದಿಲ್ಲವೆಂದು ಸಭೆಯಲ್ಲಿ ಹಾಜರಿದ್ದವರು ಸೂಚಿಸಿದರು. ಇದರ ಬಗ್ಗೆ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಇಲಾಖೆಯವರು 4-5 ದಿನಗಳಲ್ಲಿ ಸರಿಪಡಿಸುವುದಾಗಿ ಹಿಂದಿನ ಸಭೆಯಲ್ಲಿ ಸೂಚಿಸಲಾಗಿದ್ದು, ಈ ಬಗ್ಗೆ ವರದಿ ನೀಡಲು ನಿರ್ದೇಶಿಸಲಾಯಿತು. ಎ.ಜಿ.ಎಸ್. ಲೇಔಟ್ ಆರ್.ಡಬ್ಲೂ.ಎ ರವರು ಸಭೆಯಲ್ಲಿ ದೂರಿರುವಂತೆ ವಿದ್ಯುತ್ ಬೀದಿ ದೀಪಗಳಿಗೆ ಸಂಬಂಧಪಟ್ಟಂತೆ ಸದರಿಯವರ ದೂರಿನ ಬಗ್ಗೆ ಕ್ರಮವಹಿಸಿ ವರದಿ ನೀಡಲು ಸೂಚಿಸಲಾಯಿತು.
- ಸಭೆಯಲ್ಲಿ ಉಪಸ್ಥಿತರಿದ್ದ ತೋಟಗಾರಿಕೆ ಪರಿವೀಕ್ಷಕರಾದ ನರಸಪ್ಪರವರಿಗೆ ಎ.ಜಿ.ಎಸ್ ಲೇಔಟ್‌ನ ಪಾರ್ಕ್ ನಿರ್ವಹಣೆಗೆ ಸಂಬಂಧಪಟ್ಟಂತೆ ಸ್ಥಳ ಪರಿಶೀಲನೆ ನಡೆಸಿ, ಸದರಿ ಪಾರ್ಕ್ ನಿರ್ವಹಣೆಯು ಸೂಕ್ತವಾಗಿ ನಡೆಯುತ್ತಿರುವ ಬಗ್ಗೆ ಪರಿಶೀಲಿಸಿ ಮುಂದಿನ ಸಭೆಯಲ್ಲಿ ವರದಿ ಸಲ್ಲಿಸುವಂತೆ ಸೂಚಿಸಲಾಯಿತು.

ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು
ವಾರ್ಡ್ ನಂ:184 ಉತ್ತರಹಳ್ಳಿ

<u>ಪ್ರತಿಯನ್ನು:-</u>

1. ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯರವರ ಅವಗಾಹನೆ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರಿಗೆ.
5. ಮುಖ್ಯ ಆರೋಗ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ ರವರಿಗೆ.
6. ವೈದ್ಯಕೀಯ ಆರೋಗ್ಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ.
7. ಅಧೀಕ್ಷಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಅವಗಾಹನೆಗೆ ಸಲ್ಲಿಸಿದೆ.
8. ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರಿಗೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲೂ.ಎಸ್.ಎಸ್.ಬಿ) ಪರಿಶೀಲಿಸಿ ಸೂಕ್ತ ಕ್ರಮಕ್ಕಾಗಿ ಸೂಚಿಸಲಾಗಿದೆ
10. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ಪರಿಶೀಲಿಸಿ ಸೂಕ್ತ ಕ್ರಮಕ್ಕಾಗಿ ಸೂಚಿಸಲಾಗಿದೆ
11. ತೋಟಗಾರಿಕೆ ಅಧೀಕ್ಷಕರು
12. ಆರಕ್ಷಕ ನಿರೀಕ್ಷಕರು (ಟ್ರಾಫಿಕ್)
13. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ
14. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ
15. ಕಛೇರಿ ಪ್ರತಿ.

Scanned with CamScanner